IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 12, Iss 1, 2023

# ಪ್ರಭುಸತ್ಯದ ಬೆನ್ನೇರಿ ಶಿವಸತ್ಯದ ಸಾಂಸ್ಥಿಕತೆಯಲ್ಲಿ ವಿರಮಿಸಿದ ರಾಘವಾಂಕ

**ಡಾ. ಜಯಪ್ರಕಾಶ್ ಶೆಟ್ಟಿ ಹೆಚ್,** ಸಹಪ್ರಾಧ್ಯಾಪಕರು, ಸಪ್ರದಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ತೆಂಕನಿಡಿಯೂರು ಉಡುಪಿ ೫೭೬೧೦೬

---

ಕನ್ನಡ ಅಕ್ಷರಜಗತ್ತಿನ ಅತಿಪ್ರಚುರವಾದ ಕನ್ನಡಮಟ್ಟು ಪ್ರಾಯಶಃ ಷಟ್ಪದಿಯೇ. ಈ ಅಂಶಗಣಬದ್ದ ದೇಸೀಮಟ್ಟು ಮಾತ್ರಾಬಂಧಕ್ಕೆ ಹೊರಳಿ, ನೂರಾರು ಷಟ್ಪದಿಗಳ ನಡುವಿನ ಏಕಸೂತ್ರತೆಯಲ್ಲಿ ಪ್ರವಾಹದಂತೆ ನುಗ್ಗಿಬರುವ ಕತೆಯ ಹರಿವಿಗೆ ಪೂರಕವಾಯ್ತು. ಕನ್ನಡದ ಈ ಛಾಂದಸಿಕ ತಿರುವಿನಿಂದಾಗಿ ಷಟ್ಪದಿಯು ಪುರಾಣ ಮತ್ತು ಇತಿಹಾಸಗಳೆಂಬ ಎರಡೂ ಮಾದರಿಗೆ ಕಥನಮಾಧ್ಯಮವಾಯ್ತು. ಪೂರ್ವಾರ್ಧ, ಉತ್ತರಾರ್ಧದ ಸಮತುಂಡುಗಳಲ್ಲಿ ಒಂದು ಪೂರ್ಣಾನುಭವವನ್ನು ತುಂಬಬಲ್ಲ, ಸಹಜ ಸಂಗೀತಾಂಶವುಳ್ಳ 'ಹೇಳತೇನ ಕೇಳ'ದ ಈ ಸಾಮಾನ್ಯರ ಮಾದರಿ ಜನರ ಮಾದರಿಯೆನಿಸಿತು. ಹೀಗೆ ತಾಳಪ್ರಧಾನ ಗೇಯತೆಗೆ ತಿರುಗಿದ ಕನ್ನಡಕಾವ್ಯಕ್ಕೆ ಹಾಳತವಾಗಿ ಒದಗಿಬಂದ ಷಟ್ಪದಿ ಆವರೆಗಿನ ತನ್ನ ಜಢತೆಯನ್ನು ಕಳಚಿ, ಛಾಂದಸಿಕರೆಂದಂತೆ 'ಷಟ್ಚರಣವುಳ್ಳ ದುಂಬಿ'ಯಾಗಿ ಝೇಂಕರಿಸಿತು. ವೈವಿಧ್ಯದ ಬಿಡಿಪದ್ಯಕ್ಕೆ ಸೀಮಿತವಾಗಿದ್ದ ಮಟ್ಟೊಂದು ಮಹಾಕಾವ್ಯದ ಮಾಧ್ಯಮವಾಯ್ತು. ಆದರೆ ಕನ್ನಡಕಾವ್ಯದ ಈ ಯಾನಕ್ಕೆ ಚಾಲನೆಕೊಟ್ಟ ಹೆಗ್ಗಳಿಕೆ 'ಜನ ಬದುಕಬೇಕೆಂದು ಕಾವ್ಯಮುಖದಿಂದ ಹೇಳ'ಹೊರಟ ಷಟ್ಪದಿ ಪ್ರಚಾರಕ, ವಾರ್ಧಕದ ಜನಕ ರಾಘವಾಂಕನದು.

ಈ ಹರಿಹರನ ಸೋದರಳಿಯ–ಶಿಷ್ಯ ಧಾರ್ಮಿಕವಾಗಿ ವೀರಶೈವ ಎನ್ನಲಾಗಿದೆ. ಹಂಪೆಯ ಹರೀಶ್ವರನ ವರಸುತನೆಂದು ಕರೆದುಕೊಂಡ ರಾಘವಾಂಕನ ಕಾಲ ಕ್ರಿ.ಶ.೧೨೩೦. ಹರಿಹರನ ಸಹೋದರಿ ರುದ್ರಾಣಿ ಹಾಗೂ ಮಹಾದೇವ ದಂಪತಿಯರ ಮಗನೀತ. ಇದಕ್ಕೆ ಹೆಚ್ಚು ಆಕ್ಷೇಪಗಳಿಲ್ಲ. ಆದರೆ 'ಶೈವಬ್ರಾಹ್ಮಣನಾಗಿದ್ದವನು ಹರಿಹರನಂತೆ ವೀರಶೈವಕ್ಕೆ ಮತಾಂತರಗೊಂಡ' ಎಂಬುದು ನೆಲದ ಸೃಜನಶಕ್ತಿಯ ಮೂಲವೆಲ್ಲವನ್ನು ಬ್ರಾಹ್ಮಣ್ಯಕ್ಕೇ ಅಂಟಿಸಿಡುತ್ತದೆಯಾಗಿ ಅದಕ್ಕೆ ತಕರಾರಿದೆ. ಏಕೆಂದರೆ "ಕನ್ನಡ ಸಾಹಿತ್ಯಚರಿತ್ರೆ ಎಂದರೆ ಅದೊಂದು ಮರುಕಳಿಸುವ ಬಂಡಾಯದ ಚರಿತ್ರೆಯೇ ಆಗಿದೆ. ಆಲೋಚನೆ ಚಿಂತನೆ ಕಾವ್ಯಸೃಷ್ಟಿ ಮುಂತಾದುವನ್ನೆಲ್ಲಾ ಪರಭಾಷೆಯಲ್ಲಿ ಕಾದಿರಿಸಿಕೊಂಡು ಮುಂದುವರೆಯುತ್ತಾ ಹೋದ ಆರ್ಯಸಂಸ್ಕೃತಿ ಒಂದು ಕಡೆ. ಭಾಷೆ, ಬರವಣಿಗೆಗಳಿಂದ ವಂಚಿತವಾದ ಶೂದ್ರರೆನ್ನಿಸಿಕೊಂಡು, ಅನುಭವಗಳ ಗುರುತ್ವಾಕರ್ಷದ ವರ್ತುಳದಲ್ಲಿ ಸಿಕ್ಕಿ ಚರಿತ್ರೆಯನ್ನು ನಿರ್ಮಿಸುತ್ತಾ ಹೋದ ಶೂದ್ರಸಮುದಾಯ ಒಂದು ಕಡೆ. ಇವೆರಡಕ್ಕೂ ನಡೆದ ತುಯ್ದಾಟ ಹೊಯ್ದಾಟಗಳೇ ಕನ್ನಡ ಸಾಹಿತ್ಯಚರಿತ್ರೆಯ ನಡೆಯನ್ನು ಮುಂದೊತ್ತುತ್ತಾ ಹೋಯಿತು"(ವಿಮರ್ಶೆಯ ವಿಮರ್ಶೆ,೨೦೧೦,ಪು.೪೧) ಎನ್ನುವ ಕೆ.ಪಿ.ಪೂರ್ಣಚಂದ್ರತೇಜಸ್ವಿಯವರ ಆರ್ಯಸಂಸ್ಕೃತಿಯ ವಿರೋಧದ ಎಳೆಯಲ್ಲಿ ಶರಣರೊಂದಿಗೆ ಹರಿಹರ ರಾಘವಾಂಕರೂ ಇದ್ದಾರೆ. ಅದಲ್ಲದೆ ಇಬ್ಬರಲ್ಲೂ ಸಾಮಾಜಿಕ ಸತ್ಯವಾದ ಜಾತಿ, ಅಸ್ಪೃಶ್ಯತೆಯ ಬೇರೆ ಬೇರೆ ಪ್ರತಿಮೆಗಳು ಮತ್ತೆ ಮತ್ತೆ ಜೀವ ಪಡೆದಿವೆ. ಹೀಗಾಗಿ ರಾಘವಾಂಕನ ಜಾತಿಮೂಲಕ್ಕೆ ಉಚ್ಚವರ್ಣೀಯತೆಯ ಚೀಟಿ ಅಂಟಿಸುವುದು ಉಚಿತವಲ್ಲ.

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 12, Iss 1, 2023

ವ್ಯಕ್ತಿತ್ವ, ಮನೋಧರ್ಮದಲ್ಲಿ ಹಾಗೂ ಕಾವ್ಯಸ್ವರೂಪ, ಪ್ರಯೋಜನ ಕುರಿತಂತೆ ಇಬ್ಬರಿಗೂ ಸಾಮ್ಯತೆಯಿದೆ. 'ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ' ಕಾವ್ಯಬರೆದು ಕೆಡಬಾರದೆಂಬ ಹರಿಹರ ವಿಶ್ವಾಸ ರಾಘವಾಂಕನಲ್ಲೂ ಇದ್ದಂತಿದೆ. ಈ ಅರ್ಥದಲ್ಲಿ ರಗಳೆಯನ್ನು ಆಯ್ದುಕೊಳ್ಳದೆಯೂ ಆತ ಬೇರೊಂದು ನೆಲೆಯಲ್ಲಿ ಹರಿಹರಮಾರ್ಗವನ್ನೇ ಅನುಸರಿಸಿದ. ರಾಘವಾಂಕನಿಗೂ ಕನ್ನಡೇತರ ಭಾಷೆಗಳ ಒಡನಾಟದೊಂದಿಗೆ ಸಂಸ್ಕೃತಸಾಹಿತ್ಯದಲ್ಲೂ ಪರಿಶ್ರಮವಿತ್ತು. ಆತನ 'ಉಭಯಕವಿ ಕಮಲರವಿ', 'ಉಭಯಕವಿ ಕವಿಶರಭಬೇರುಂಡ' 'ಅದಟಕವಿನಿಕರ ಚೌದಂತ' ಬಿರುದುಗಳಲ್ಲಿ ಈ ಬಹುಭಾಷಾ ಪರಿಣತಿಯ ಸೂಚನೆಯಿದೆ. ಕನ್ನಡದಾಚೆಗೂ ಆತನಿಗಿದ್ದ ಪ್ರಸರಣವನ್ನು ಪುಷ್ಟೀಕರಿಸುವ ಐತಿಹ್ಯಗಳೂ ಇವೆ. ಉದ್ದಂಡಷಟ್ಪದಿಯಲ್ಲಿ 'ವೀರೇಶಚರಿತೆ' ಬರೆದು ಕವಿಗಳನ್ನು ಅವಮಾನಿಸುತ್ತಿದ್ದ ವಾರಂಗಲ್ಲಿನ ಪ್ರತಾಪರುದ್ರನ ಆಸ್ಥಾನದ ತ್ರಿದಂಡಿಗಳನ್ನು ಸೋಲಿಸಿ, ಅವಮಾನಿತರಾದ ಅವರ ಮಾರಣಾಂತಿಕ ಹಲ್ಲೆಯಿಂದ ಪಾರಾಗಿ ಬೇಲೂರಿಗೆ ಬಂದು ಐಕ್ಯನಾದುದು ಅಂತಹ ಐತಿಹ್ಯಗಳಲ್ಲಿ ಒಂದು. ಹರಿಶ್ಚಂದ್ರಕಾವ್ಯವಲ್ಲದೆ ಈ ಹಾಡುಗಬ್ಬದ ಆರಂಭಕಾರನ ಹೆಸರಲ್ಲಿರುವ 'ಹರಿಹರಮಹತ್ವ', 'ಸಿದ್ಧರಾಮಚಾರಿತ್ರ್ಯ', 'ಸೋಮನಾಥಚರಿತೆ', ಶರಭಚಾರಿತ್ರ್ಯ', 'ವೀರೇಶಚರಿತೆ'ಗಳನ್ನು ಹರಿಹರನ ಕೋಪದಿಂದ ಉದುರಿದ ಹಲ್ಲುಗಳನ್ನು ಮರಳಿ ಪಡೆಯಲೆಂದು ಬರೆದ ಶಿವಕೃತಿಗಳೆಂದೇ ಕರೆಯಲಾಗುತ್ತದೆ. ಇವುಗಳಲ್ಲಿ 'ಹರಿಹರಮಹತ್ವ', 'ಶರಭಚಾರಿತ್ರ್ಯ'ಗಳು ಸಿಕ್ಕಿಲ್ಲ. ಇನ್ನು ಛಂದೋನೆಲೆಯಲ್ಲಿ ಚಂದ್ರಮತಿಯ ಹಡೆದೊಡಲ ದುಃಖವನ್ನು ಮಂದಾನಿಲದಲ್ಲಿ ಮಡುವಾಗಿಸಿ ರಗಳೆಯಲ್ಲೂ ತಾನು ಪರಿಣತನೆಂಬ ಸೂಚನೆ ನೀಡುವ ಈ ವಾರ್ಧಕದ ಮೋಡಿಕಾರನಿಗೆ ಒಲಿದು ಬಂದುದು ಮಾತ್ರ ಷಟ್ಪದಿಯೇ.

**ಹರಿಶ್ಚಂದ್ರಕಾವ್ಯ**

ರಾಘವಾಂಕನ ಮುಖ್ಯಕೃತಿಯೆನಿಸಿ ಸಾಹಿತ್ಯಚರಿತ್ರೆಯಲ್ಲಿನ ಆತನ ಸ್ಥಾನ ಭದ್ರತೆಗೆ ಕಾರಣವಾದುದು ಹರಿಶ್ಚಂದ್ರಕಾವ್ಯವೇ. (ಈ ಪ್ರಚುರತೆಯಲ್ಲಿ ಶೈಕ್ಷಣಿಕ ಆವರಣದ ಪಠ್ಯರಾಜಕಾರಣ ಮತ್ತು ಸಾಮಾಜಿಕ ಆವರಣದ ಸಾಂಸ್ಕೃತಿಕರಾಜಕಾರಣಗಳಿವೆ). ಆತನ ಶಿವಪಂಚಕಗಳ ಸರಣಿಗೆ ಹೊರತಾದುದಿದು. ಇದರ ವಸ್ತುವಿಗೆ ಉಳಿದವುಗಳ ಮತೀಯ ಆಯಾಮವಿಲ್ಲ. ಆದಯ್ಯ, ಸಿದ್ಧರಾಮರಂತೆ ಹರಿಶ್ಚಂದ್ರ ಶರಣನಲ್ಲ. ವೈದಿಕ ಪುರಾಣೋಕ್ತ ಮೂಲದಿಂದ ಮರುಹುಟ್ಟು ಪಡೆದಾತ. ಐತರೇಯ ಬ್ರಾಹ್ಮಣದಲ್ಲಿ ವರುಣನಿಗೆ ಮಾತುಗೊಟ್ಟು ವಂಚಿಸಿದಾತನೇ ರಾಘವಾಂಕನಲ್ಲಿ, 'ಹೊಡೆದ ಕಡುಗದ ಬಾಯ ಕಡೆಯ ಹೊಡೆಗಳನಾಂತು ಮಡದಿಯೆಡೆಗೊರಳ ನಡುವಡಸಿ' ಮುಕ್ಕಣ್ಣನನ್ನು ಮೂಡಿಸುವ ಋತನಿಷ್ಠೆಯ ಚಿರಪ್ರತೀಕ. 'ಅತಿಹುಸಿವ ಯತಿ ಹೊಲೆಯ ಹುಸಿಯದಿಹ ಹೊಲೆಯನುನ್ನತ ಯತಿವರ'ನೆಂದು 'ಸತ್ಯವೇ ದೇವರೆಂಬ' ದಾರ್ಶನಿಕತೆಗೆ ಬದುಕು ಮೀಸಲಿಟ್ಟಾತ. ಇದು ವ್ಯಕ್ತಿಗಿಂತ ವಿಚಾರವೇ ಮುಖ್ಯವಾಗಿ ಸತ್ಯವೇ ಸಜೀವವಾದ ಕಥೆ. ಹಾಗಾಗಿ ಇಲ್ಲಿ 'ಪುರದ ಪುಣ್ಯವೇ ಪುರುಷಾಕಾರಕ್ಕೆ' ತಿರುಗಿಕೊಳ್ಳುತ್ತದೆ. ಈ ಸತ್ಯಕ್ಕೆಂದು ಸವೆಸಿದ ಹಾದಿಯೇ ಕಾವ್ಯವಾಗುತ್ತದೆ.

ಆದರೆ ಆ ಸತ್ಯ ಯಾವುದು? ಅದು ಅರಸನದೇ, ಮನುಷ್ಯನದೇ? ಗಂಡಿನದೇ, ಜೀವಸಾಮಾನ್ಯದ್ದೇ? ಯಾರ ಪಾಲಿನ ಸತ್ಯವೆಂಬ ಪ್ರಶ್ನೆಯಲ್ಲಿ ಕೃತಿಯ ಅಡ್ಡಹಾದಿಗಳು ಕಾಣಿಸುತ್ತವೆ. ಏಕೆಂದರೆ ಸತ್ಯವು ಸದಾ ಶೋಧಿತವಾಗಬಲ್ಲದ್ದು. ಅದಕ್ಕೆ ಸ್ಥಿತರೂಪದ ನಿಲುಗಡೆಯಿಲ್ಲ. ಅದು ಗುರಿಯಿಟ್ಟು ತಲುಪಿ, ತಂಗಿ, ಮರಳುವ ನಿಲ್ದಾಣವಲ್ಲ. ಅದಕ್ಕೊಂದು ಸಾಮಾನ್ಯ ಸ್ವರೂಪವೂ ಇರದು. ಹೀಗಾಗಿ ಸಾಪೇಕ್ಷವೇ ಆದ

ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 12, Iss 1, 2023

ಸತ್ಯವನ್ನು ಕುರಿತಂತೆ ಕೃತಿಯ ಮಾತನ್ನು ಹೇಗೆ ಅರ್ಥೈಸಬೇಕು? ಜನ ಬದುಕಬೇಕೆಂದು ಕವಿ ಕಟ್ಟಿಕೊಡುವ ಸತ್ಯದ ಸಂಕಥನದಲ್ಲೇನಿದೆ? ಇದನ್ನು ಜನ ಹೇಗೆ ಸ್ವೀಕರಿಸಬೇಕು? ಯಾಕೆಂದರೆ ಇಲ್ಲಿ ಮಾತುಕೊಡುವ, ಪಾಲಿಸುವ ಪ್ರಕ್ರಿಯೆಯಲ್ಲಿ ಕಾರಣವಿಲ್ಲದ ಪರಿಣಾಮಕ್ಕೆ ಗುರಿಯಾಗುವ ರಾಜ್ಯ(ಜನ), ಸತಿ–ಸುತರುಗಳ ಸಂಕಟಗಳಿಗೆ ಹೊಣೆಗಾರರಿಲ್ಲ, ಮೌಲ್ಯವೂ ಇಲ್ಲ. ಆದರೆ ಮಾತನ್ನೇ ಪ್ರಮಾಣವಾಗಿ ಬಳಸಿಕೊಂಡು ಯಾವುದು ಜ್ಞಾನ, ಸಂಸ್ಕೃತಿ, ಮೌಲ್ಯ ಎಂಬ ಆಯ್ಕೆ ಮತ್ತು ಪ್ರತ್ಯೇಕತೆಯ ವಿಭಜನೆ ಇಲ್ಲಿದೆ. ಸಾಂಸ್ಥಿಕ ಹಿತಾಸಕ್ತಿಯ ಕಾವಲಿಗೆ ನಿಂತ ಸತ್ಯದ ಸಾಮಾನ್ಯ ರಾಜಕಾರಣವಿದೆ. ಏಕಸತ್ಯದ ಪ್ರತಿಪಾದನೆಯೊಂದಿಗೆ ಸಾಮಾನ್ಯರ ಸಮ್ಮತಿ ಉತ್ಪಾದನೆಯ ಯತ್ನವಿದೆ. ಹಾಗಾಗಿ ಯಾವುದು ಹರಸಮಾನವೆಂದು ಘೋಷಿಸಲಾಗಿದೆಯೋ, ಅದು ಅರಸೊತ್ತಿಗೆಯ ಸತ್ಯ, ವರ್ಣಶ್ರೇಷ್ಠತೆಯ ಸತ್ಯವಷ್ಟೇ. ಯಾಕೆಂದರೆ ಕೊನೆಗೂ ಇಲ್ಲಿ ಮಲಿನವಾಗದಂತೆ ರಕ್ಷಿತವಾಗುವುದು ಕುಲ ಮತ್ತು ಪ್ರಭುತ್ವದ ಸಂಕೇತಗಳೇ. ಸತ್ಯವಂತ ಹೊಲೆಯನಿಗಿಂತ ಪ್ರಭುಸತ್ಯವನ್ನು ಕಾದ ಕುಲೀನ ಅರಸನೇ ಶ್ರೇಷ್ಠನಾಗುತ್ತಾನೆ. ಸತ್ಯದ ಹೆಸರಲ್ಲಿ ಪ್ರಭುತ್ವವೆನ್ನುವ ಸಂಸ್ಥೆಯು ಕಾಯಬೇಕಾದ ಸಾಮಾಜಿಕ ಯಥಾಸ್ಥಿತಿಯ ಪಾವಿತ್ರ್ಯ ರಕ್ಷಣೆಯೇ ಪ್ರತಿಪಾದಿತವಾಗುತ್ತದೆ. ಯಾವುದನ್ನು ಕಳೆದುಕೊಂಡರೂ ಕುಲಸಂಕರಕ್ಕೆ, ಜಾತಿಸಂಕರಕ್ಕೆ ಅವಕಾಶವೀಯದ ಹರಿಶ್ಚಂದ್ರ, ಕುಲಸಂಕರವನ್ನು ಒತ್ತಾಯಿಸುವ ವಿಶ್ವಾಮಿತ್ರನೆದುರು ಗೆಲ್ಲುತ್ತಾನೆ! ಪ್ರಾಯಶಃ ಹರಿಹರನ ಮೆಟ್ಟಿನೇಟು ಪ್ರಭುಸತ್ಯದ ಜೊತೆಗಿನ ಈ ಯಾನವನ್ನು ವಿರೋಧಿಸಿದ್ದಾಗಿರಲೂಬಹುದು!?

ಆದರೆ ಪ್ರಭುಸತ್ಯದ ಮೇನೆ ಏರಿದ ಕಾವ್ಯ, ಜಾತಿ ಹಾಗೂ ಪುರುಷಾಧಿಪತ್ಯಕ್ಕೊಳಪಟ್ಟ ಸಾಮಾಜಿಕ ದಿಬ್ಬವನ್ನೂ ಹಾದು ಹೋಗಿದೆ. ಹಾಗಾಗಿ ಅದಕ್ಕೆ ಜಾತಿ ಆವರಣದ ಸಾಂಕೇತಿಕ ಮೀರುವಿಕೆಯಲ್ಲಾದರೂ ರಾಜನಾದವನನ್ನು ಹೊಲೆಯನ ಆಳಾಗಿಸುವ ವಿಪರೀತವೋ, ಜೀತಗಾರರನ್ನು ವಿಕ್ರಯಿಸುವ ಶಕ್ತಿಕೇಂದ್ರವನ್ನು ಬದಲಾಯಿಸುವ ಸಾಂಸ್ಕೃತಿಕ ಸಾಹಸವೋ ಸಾಧ್ಯವಾಗಿದೆ. ಅಷ್ಟೇ ಅಲ್ಲ, ಹುಟ್ಟಿನಿಂದಲ್ಲದೆ ವಿಕ್ರಯದ ಮೂಲಕವೂ ಕುಲವನ್ನು ಆವಾಹಿಸಿಕೊಳ್ಳಬಹುದೆಂಬುದಕ್ಕೆ ಅದು ಸಾಕ್ಷಿಯಾಗುತ್ತಿದೆ. ಕುಟುಂಬ ಸಂಬಂಧದ ನೆಲೆಯಲ್ಲಿ ಹೆಣ್ಣಿನ ಬದುಕು ಹಾಗೂ ಜೀತಪದ್ಧತಿಯ ಭಾಗವಾದ ಮನುಷ್ಯ ಮಾರಾಟದ ಬೆಲೆಯುಳ್ಳ ಸಾಂಸ್ಕೃತಿಕಸತ್ಯದ ದಾಖಲೆಯೂ ಆಗುತ್ತಿದೆ. ದೇಗುಲಗಳ ಕೇಂದ್ರವಾಗಿದ್ದ ನಗರಗಳು ಮನುಷ್ಯ ವಿಕ್ರಯದ ನರಕಗಳಾಗಿದ್ದುದನ್ನೂ ಪರೋಕ್ಷವಾಗಿ ಸೂಚಿಸುತ್ತದೆ. ಚರಿತ್ರೆಯ ಮಹತ್ವದ ಗುರುತಾಗದೆಯೂ, ಗಂಡಿನ ಹುಸಿ ಆದರ್ಶ, ಅಹಮಿಕೆಗಳಿಗೆ ಬಲಿಯಾಗುತ್ತಾ ಬಂದ ಹೆಣ್ಣಿನ ಬದುಕಿನ ಬೆಲೆಗಟ್ಟುವ ಕೆಲಸವನ್ನೂ ಸದ್ದಿಲ್ಲದೆ ಮಾಡುವ ಈ ಕೃತಿಗೆ ಸಾಂಸ್ಕೃತಿಕಪಠ್ಯವಾಗಿ ವಿಶೇಷ ಮಹತ್ವವಿದೆ. ಕೃತಿಯ ಕಟ್ಟೋಣವನ್ನು ಗಮನಿಸುವುದಾದರೆ ಮಧ್ಯಕಾಲೀನ ಜಾನಪದ ಪ್ರದರ್ಶನಕಲೆಗಳು, ಅದರಲ್ಲೂ ನಾಟಕ ಕಲೆಯ ವಿಶೇಷ ಪ್ರಭಾವ ಇದರ ಮೇಲಾದಂತಿದೆ. ಕೃತಿ ನಿರೂಪಣೆ ಬಹುಮಟ್ಟಿಗೆ ನಾಟಕದ ಪ್ರೇಕ್ಷಕರನ್ನು ಗಮನಿಸಿಕೊಂಡಂತಿದೆ. ಪಾತ್ರಗಳ ಮುಖಾಮುಖಿ ಸಂಭಾಷಣೆಯ ಅಚ್ಚುಕಟ್ಟಾದ ಚಿತ್ರಣದಲ್ಲಿ ಕೃತಿಯ ನಾಟಕೀಯತೆ ನಿಚ್ಚಳವಾಗಿ ತೆರೆದುಕೊಳ್ಳುತ್ತದೆ. ಸುಲಲಿತವಾದ ಓಟವುಳ್ಳ ಭಾಷೆಯೊಂದಿಗೆ ಉತ್ಕೃಷ್ಟ ಕಥನಕಾವ್ಯದ ಮಾದರಿಯೆನಿಸಿ, ಕಥನ ಮತ್ತು ವರ್ಣನೆಗಳು ಹದ್ದು ಮೀರದಂತೆ ಒಂದಕ್ಕೊಂದು ಹೊಂದಿಕೊಂಡು ರಚಿತವಾದ ವಾರ್ಧಕ ಷಟ್ಪದಿಯ ಈ ಕೃತಿ, ಸನ್ನಿವೇಶ ರಚನೆಯಲ್ಲಿ ಆ ಮುಂದಿನ ಎಲ್ಲಾ ಷಟ್ಪದಿಗಳಿಗೆ ಮಾದರಿಯಂತಿದೆ.

**ಇತರ ಕೃತಿಗಳು**

ಸೋಮನಾಥಚಾರಿತ್ರ, ಸಿದ್ಧರಾಮಚರಿತೆ ಮತ್ತು ವೀರೇಶಚರಿತೆಗಳ ಆತನ ಕಾವ್ಯಯಾನ ಬೇರೆ ಗತಿಯದು. ಪ್ರಭುತ್ವಕ್ಕೆ ಬದಲಾಗಿ ದೈವಪ್ರಭುತ್ವದ ಪೋಷಣೆಗೆ ನಿಲ್ಲುವ ಇವುಗಳಲ್ಲಿ ಸಾಂಸ್ಥಿಕ ಶಿವಸತ್ಯದ

ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 12, Iss 1, 2023

ಮತೀಯತೆ ಇದೆ. 'ಸೋಮನಾಥಚಾರಿತ್ರ' ಮತ್ತು 'ಸಿದ್ಧರಾಮಚರಿತೆ'ಗಳಲ್ಲಿ ಶಿವಶರಣರ ಜೀವನವೇ ವಸ್ತು. 'ವೀರೇಶಚರಿತೆ'ಯದು ವೀರಭದ್ರನ ಕಥೆ. ಶರಣ ಆದಯ್ಯ ಪುಲಿಗೆರೆಯ ಬಸದಿಯ ಅರುಹನ ಮೂರ್ತಿ ಭಗ್ನಗೊಳಿಸಿ ಅಲ್ಲಿ ಸೋಮನಾಥನನ್ನು ಪ್ರತಿಷ್ಠಾಪಿಸುವುದೇ 'ಸೋಮನಾಥ ಚಾರಿತ್ರ'ದ ಕತೆ. ಆದಯ್ಯ ಸಮಯಾಚಾರಕ್ಕಾಗಿ ಪ್ರಾಣಕೊಡಲೂ ಸಿದ್ಧವಿರುವ ವೀರಭಕ್ತ. 'ನಿನ್ನ ಹಣೆಯೊಳು ಭಸಿತ ನಿನ್ನ ಬಾಯೊಳು ಮಂತ್ರ ನಿನ್ನ ತೊಡಿಗೆಯೊಳು ರುದ್ರಾಕ್ಷಿಗಳಿರಲ್ಕೆ ನಿನಗಿನ್ನೇಕೆ ಪರರ ದೈವವನಳಿದು ಶಿವನ ನಿಲಿಸಿಹೆನೆಂಬ ಕೃತ್ಯ?' ಎನ್ನುವ ಪಶುಪತಿ ಯೋಗೀಂದ್ರನ ಪ್ರಶ್ನೆಗೆ, 'ಎನ್ನ ದೇಹಾಭಿಮಾನ ನಿಮಿತ್ತ ಮಾಡೆ ಬಳಿಕೆನ್ನಿಂದ ನರಕಿಗಳು ಬೇರಿಲ್ಲ ಧರಣಿಯೊಳಗೆನ್ನ ಸಮಯಾಭಿಮಾನ ನಿಮಿತ್ತ ಮಾಡೆ ದೋಷವೆನಗಿಲ್ಲ' ಎಂಬ ಪ್ರತ್ಯುತ್ತರ ಆತನದು. ಹೀಗೆ ಆದಯ್ಯನಲ್ಲೂ ನಂಬಿದ ಸತ್ಯಕ್ಕಾಗಿ ನಡೆದ ನಡೆಯಿದೆ. ಆದರದು 'ಸತ್ಯವೇ ದೇವರು' ಎನ್ನುವುದಕ್ಕಿಂತ 'ದೇವರೇ ಸತ್ಯ'ವೆಂದ ಏಕವಾದದ ಕ್ರಿಯಾಗತಿ. ಆಳವಾದ ಧಾರ್ಮಿಕ ನಿಷ್ಠೆಯಲ್ಲಿ ತನಗೆ ವಿರುದ್ಧವಾದದ್ದರ ಬಗ್ಗೆ ಬಂಡೇಳುವ ಕ್ಷಾತ್ರಸ್ವರೂಪದ ಧಾರ್ಮಿಕನಿಷ್ಠೆ.

ಮತೀಯಕಾವ್ಯವಾಗಿಯೂ, 'ಸಿದ್ಧರಾಮಚಾರಿತ್ರ್ಯ'ವು ಸೋಮನಾಥ ಚರಿತೆಗಿಂತ ಭಿನ್ನ. ರಾಘವಾಂಕನ ಈ ಎರಡನೆಯ ದೀರ್ಘ ಷಟ್ಪದಿಕೃತಿ ವಚನಕಾರ ಸಿದ್ಧರಾಮನ ಕಥೆಯ ಪುರಾಣರೂಪದ ಹೆಣಿಗೆ. ಧೂಳಿಮಾಕಾಳನಾಗಿ ದನಕಾಯುತ್ತಿದ್ದ ಹುಡುಗನೇ ಶ್ರೀಶೈಲದ ಮಲ್ಲಿಕಾರ್ಜುನನ ಸತ್ಪ್ರೇರಣೆಯಿಂದ ಕಾಯಕಯೋಗಿಯಾಗಿ ಸೊನ್ನಲಿಗೆಗೆ ಬಂದು, ದುಃಖಿತರನ್ನು ಉದ್ಧರಿಸುವ ಅನುಕಂಪೆಯ ಕಾರ್ಯಗಳಲ್ಲಿ ಮಗ್ನನಾಗುತ್ತಾನೆ. ಭೂತದಯೆ ಈತನ ಸ್ವಭಾವ. ನರಕದಲ್ಲಿರುವ ಶಿಷ್ಯ ಬಿಲ್ಲೇಶ ಬೊಮ್ಮಯ್ಯನ ಜೊತೆಗೆ ಇಡಿಯ ನರಕವಾಸಿಗಳನ್ನೇ ಮೇಲೆತ್ತಬಲ್ಲ ಜೀವದಯೆ ಅದು! ಈ ಸಿದ್ಧರಾಮನ ಜೀವನವೇ ಒಂದು ಧರ್ಮಸಂಸ್ಥಾಪನೆಯ ಕತೆ. ಆದರದು ಆದಯ್ಯನ ಧರ್ಮಸಂಸ್ಥಾಪನದ ಮಾರ್ಗವಲ್ಲ. ಈ ಭಕ್ತನಕ್ಕೊಂದು ಮುಗ್ಧತೆ ಇದೆ. ಕೀರ್ತಿನಾಥ ಕುರ್ತಕೋಟಿ ಅವರೆನ್ನುವಂತೆ "ಸೊನ್ನಲಿಗೆಯ ಪರಿಸರವನ್ನು ಧರ್ಮಕ್ಷೇತ್ರವನ್ನಾಗಿ ಮಾಡಿದ ಸಿದ್ಧರಾಮನ ಚರಿತ್ರೆ ಧರ್ಮದ ಸೃಜನಶಕ್ತಿಯ ಅದ್ಭುತವಾದ ಅಭಿವ್ಯಕ್ತಿ" (ಕನ್ನಡ ಸಾಹಿತ್ಯ ಸಂಗಾತಿ, ೨೦೧೦ ಪು.೧೭೬,)

'ವೀರೇಶಚರಿತೆ'ಯದು ವೀರಭದ್ರನಿಂದಾದ ದಕ್ಷಬ್ರಹ್ಮನ ಸಂಹಾರದ ಕತೆ. ದಕ್ಷನೊಂದಿಗೆ ಯಜ್ಞಸಂಸ್ಕೃತಿಯ ವಕ್ತಾರಿಕೆಯ ಸಮೂಹವೇ ಕೃತಿಯ ಎದುರಾಳಿ. ಆಕ್ರಮಣಕಾರಿಯಾದ ಈ ಕತೆಗೆ ಹಿಂಸೆ, ವಿನಾಶಗಳ ನಕಾರಾತ್ಮಕ ಮುಖವಿದೆ. ಆದರದು ಸಂಕೇತಗಳನ್ನು ಭಗ್ನಗೊಳಿಸುವ ಹಿಂಸೆ. ಪಾಂಥಿಕ ಪ್ರತಿಹೋರಾಟ. ಅಗ್ನಿಪರಂಪರೆ ವಿರುದ್ಧದ ಬಂಡಾಯ. ಯಜ್ಞಸಂಸ್ಕೃತಿಗೆ ಪ್ರತಿಯಾದ ಸಾಂಸ್ಕೃತಿಕ ಪ್ರತಿರಾಜಕಾರಣ. ವೀರಭದ್ರನೊಂದಿಗೆ ಯುದ್ಧಕ್ಕೆ ಹೋಗಿದ್ದ ಸೈನಿಕರು ಯುದ್ಧಸೂರೆಯಾಗಿ ಸೂರ್ಯನ ಹಲ್ಲು, ಸರಸ್ವತಿಯ ಮೂಗು, ವಿಷ್ಣುವಿನ ಆಯುಧ, ದಕ್ಷನ ರುಂಡ, ಅಗ್ನಿಯ ನಾಲಗೆ ಇತ್ಯಾದಿಗಳನ್ನು ತಂದು ಶಿವನ ಮುಂದೆ ಜೋಡಿಸುವಲ್ಲಿ ಈ ಅಂಶ ಸ್ಪಷ್ಟವಾಗಿಯೇ ಇದೆ. ಹೀಗೆ ವೈದಿಕ ಅಸ್ಮಿತೆಗಳ ಭಗ್ನಗೊಳಿಸುವಿಕೆಯನ್ನೇ ಕೇಂದ್ರಗ್ರಹಿಕೆಯಾಗುಳ್ಳ ಕೃತಿ, ಕಥೆಯ ಮೂಲಕವೇ ವೈದಿಕತೆಗೆ ಎದುರಾದ ಕಥನರಾಜಕಾರಣ ಮಾಡುತ್ತದೆ. (ಆದರೆ ತಪ್ಪು ಒಪ್ಪಿಕೊಂಡು ಶರಣಾಗುವ ದಕ್ಷಬ್ರಹ್ಮನಿಗೆ ಶಿವನಿಂದ 'ಶತಯಜ್ಞಗಳ ಫಲ' ಕೊಡಿಸುವಲ್ಲಿ ಈ ತಾತ್ವಿಕತೆಯಲ್ಲಿ ಗೊಂದಲವಿದೆ)

ರಾಘವಾಂಕನ 'ಹರನೆಂಬುದೇಸತ್ಯ'ವೆಂಬ ಘೋಷಣೆಯಲ್ಲಿ ಆತ್ಯಂತಿಕವಾಗಿ ಸಾಂಸ್ಥಿಕಪ್ರಭುತ್ವದ ಪರ ಧ್ವನಿಯಿದೆ. ಆತನ ಶಿವಪಂಚಕಗಳ ಮಿಲಿಟೆಂಟ್ ನಾಯಕರ ಉಗ್ರಮತೀಯತೆಯಲ್ಲಿ ಸಾಂಸ್ಥಿಕ

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
*Research Paper* **© 2012 IJFANS. All Rights Reserved**, UGC CARE Listed ( Group -I) Journal Volume 12, Iss 1, 2023

ಶಿವಪ್ರಭುತ್ವವಿದೆ. ಸಿದ್ಧರಾಮನ ಜೀವಕರುಣೆಯ ಜೊತೆಗೇ ಇರುವ ಈ ನಿರೂಪಣೆಗಳ ಹಿಂದಿನ ರಾಘವಾಂಕನ ತುರ್ತುಗಳಿಗಾಗಿ ಚರಿತ್ರೆಯ ಗರ್ಭವನ್ನೇ ಶೋಧಿಸಬೇಕಿದೆ. ಪ್ರಾಯಶಃ ವಚನೋತ್ತರ ಕಾಲಘಟ್ಟದ ವೀರಶೈವರು ಅಸ್ಥಿತ್ವ ಮತ್ತು ಯಾಜಮಾನ್ಯಕ್ಕಾಗಿ ಎದುರಾಳಿ ಪಂಥಗಳ ವಿರುದ್ಧ ಸೆಣಸಾಡಿದ ಚಾರಿತ್ರಿಕ ವಾಸ್ತವವೇ ಹರಿಹರ ರಾಘವಾಂಕರ ನಾಯಕರುಗಳ ಮಿಲಿಟೆಂಟ್ ಮಾದರಿಗೆ ಕಾರಣವಿರಬಹುದು. ಆದರೆ ಈ ಉಗ್ರಮತೀಯತೆ, ಯುದ್ಧದಾಹಗಳು ರಾಘವಾಂಕನ ಮತನಿಷ್ಠೆಗೆ ಕ್ಷಾತ್ರಸ್ವರೂಪವನ್ನು ಮೆತ್ತಿವೆ. ಉಭಯಕವಿ ಎನಿಸಿದ ಬಹುತ್ವವಾದಿಯನ್ನು ಮತವಿಚಾರದ ಏಕತತ್ವವಾದಿಯಾಗಿಸಿವೆ. ಹೀಗಾಗಿ ದೇಹ ದೇಗುಲವೆಂದ ಶರಣಸಂಸ್ಕೃತಿಗೆ ವಿರೋಧವಾದ ಅನೇಕ ಅಂಶಗಳು ರಾಘವಾಂಕನಲ್ಲಿವೆ. ಆತನ ಆದಯ್ಯ, ಸಿದ್ಧರಾಮರುಗಳು 'ಗುಡಿ'ಗಳನ್ನೇ ಕಟ್ಟಿಸುತ್ತಾರೆ. ಹರಿಶ್ಚಂದ್ರನೋ ಸ್ಥಾವರಲಿಂಗದ ಸೊಬಗಿಗೆ ಮೈಮರೆಯುತ್ತಾನೆ! ಪ್ರಭುತ್ವವನ್ನು ಸಂಭ್ರಮಿಸದ ಶರಣರಿಗಿಂತ ಭಿನ್ನವಾಗಿ, ರಾಘವಾಂಕ ಸತ್ಯವಾದಿ ದೊರೆಹರಿಶ್ಚಂದ್ರನನ್ನು ಸತ್ಯವಂತನಾದ ಹೊಲೆಯನಿಗಿಂತ ಶ್ರೇಷ್ಠನೆನ್ನುತ್ತಾನೆ. ಅಷ್ಟೇ ಅಲ್ಲ, 'ಆತನನ್ನು ಹೊಗಳಿಕೊಂಡು ಜನಬದುಕಲಿ' ಎಂದೇ ಕಾವ್ಯ ಬರೆದೆನೆನ್ನುತ್ತಾನೆ! ಹೀಗಾಗಿ ರಾಘವಾಂಕನ ಕಥನಜಗತ್ತು ಪ್ರಭುಸತ್ಯದಿಂದ ತೊಡಗಿ ಸಾಂಸ್ಥಿಕಶಿವಸತ್ಯದಲ್ಲೇ ವಿರಮಿಸಿದಂತಿದೆ. ಈ ನಡುವೆಯೂ ಆತನಲ್ಲಿ ರಾಜತ್ವದ ಅಹಂಕಾರವನ್ನು ಕಂಗೆಡಿಸುವಂತೆ ಪ್ರಶ್ನೆ ಎತ್ತುವ ದಲಿತ ಪಾತ್ರಗಳಿವೆ. ಸಾಹಿತ್ಯವು ಜನಬದುಕುವ ಸತ್ಪ್ರೇರಣೆಯಾಗಬಲ್ಲದೆಂಬ ಸಾಮಾಜಿಕ ನಂಬಿಕೆ ಇದೆ. ನಾಟಕೀಯತೆ, ಕಥನಕೌಶಲಗಳ ಮೇಳೈಕೆಯಲ್ಲಿ ಮುಂದಿನ ಷಟ್ಪದಿಕವಿಗಳಿಗೆ ಮಾದರಿಯಾಗಬಲ್ಲ ಗುಣವಿದೆ. ಪಾತ್ರಸ್ವರೂಪ, ವರ್ಣನಾಜಗತ್ತು, ಭಾಷಿಕ ಸಂಪತ್ತಿನಲ್ಲಿ ಕನ್ನಡವನ್ನು ಸಮೃದ್ಧಗೊಳಿಸಬಲ್ಲ ಹಿರಿಮೆಯಿದೆ. ಇದನ್ನು ಅಲ್ಲಗಳೆಯಲಾಗದು.

*****